**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 27 ಪ್ರಾ.ಸಾ. : 14**

ಸಾಕ್ಷಿಯ ಹೆಸರು : ರಾಮಾ
ತಂದೆಯ ಹೆಸರು : Marya ಮೇದಾರ್
ವಯಸ್ಸು : 55 ವರ್ಷ
ಉದ್ಯೋಗ : ಬಿದಿರಿನ ನೆಯ್ಗೆ ಕೆಲಸ
ವಾಸ : ಕಾನಗೋಡು , ಸಿದ್ದಾಪುರ

**ದಿನಾಂಕಃ 11-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿ ಬೆಳೆದ ಊರು ಕಾನಗೋಡ ಗ್ರಾಮ ಆಗಿದೆ . ಆರೋಪಿ ನನಗೆ ಗೊತ್ತಿದ್ದಾನೆ . ನಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿ ಆರೋಪಿ ಇದ್ದ . ಆರೋಪಿ ನಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದಾಗ ಸ್ವಚ್ಛ ಗ್ರಾಮ ಯೋಜನೆ ನಮ್ಮ ಗ್ರಾಮ ಪಂಚಾಯತಿಗೆ ಮಂಜೂರಾದ ವಿಚಾರ ನನಗೆ ಗೊತ್ತಿಲ್ಲ. 2001-2002 ರಲ್ಲಿ ಆ ಯೋಜನೆಯಡಿಯಲ್ಲಿ ರೂ. 20,00,000/- ಮಂಜೂರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಯೋಜನೆಯಡಿಯಲ್ಲಿ ಪ್ರತಿ ಫಲಾನುಭವಿಗೆ ರೂ. 3,000/- ಅನ್ನು ಕೊಡುತ್ತಿದ್ದರು ಎನ್ನುವುದು ಗೊತ್ತಿಲ್ಲ. ನಾನು ಒಬ್ಬ ಫಲಾನುಭವಿಯಾಗಿ ಅದರಲ್ಲಿ ಆಯ್ಕೆಯಾಗಿದ್ದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ಪೊಲೀಸ್ ನವರು ನನ್ನ ಬಳಿ ಬಂದಿದ್ದರು ಸಹಿ ಮಾಡಲು ಕೇಳಿದರು ನಾನು ಸಹಿ ಮಾಡಿದ್ದೇನೆ . ಯಾವ ಪೊಲೀಸ್ ನವರು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಆಗ ಬಂದಿದ್ದ ಪೊಲೀಸ್ ನವರು ವಿಚಾರಣೆ ಮಾಡಿದರು. 2001-2002 ನೇ ಸಾಲಿನಲ್ಲಿ ಕಾನಗೋಡು ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಕಾಮಗಾರಿ ಕೈಗೊಳ್ಳಲು ರೂ.

20,00,000/- ಸರ್ಕಾರದಿಂದ ಮಂಜೂರಾಗಿತ್ತು, ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 210 ಫಲಾನುಭವಿಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಲು ಮಂಜೂರಾತಿ ನೀಡಲಾಗಿತ್ತು, ನಾನೂ ಸಹ ಅದರಲ್ಲಿ ಒಬ್ಬ ಫಲಾನುಭವಿಯಾಗಿದ್ದೆ ನನ್ನ ಹೆಸರು ಆಯ್ಕೆಯಾಗಿತ್ತು. ಪ್ರತಿಯೊಬ್ಬ ಫಲಾನುಭವಿಗೆ ರೂ. 3,000/-ಅನ್ನು ಕೊಡಬೇಕಾಗಿತ್ತು ಎಂದು ನಾನು ಪೊಲೀಸ್ ನವರಿಗೆ ಆಗ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ನೆನಪಿಲ್ಲ. ನನಗೆ ರೂ. 3,000/- ಅನ್ನು ಕೊಟ್ಟಿಲ್ಲ ಮತ್ತು ನನಗೆ ಶೌಚಾಲಯ ಕಟ್ಟಿಸಿಕೊಟ್ಟಿಲ್ಲ ಎಂದರೆ ಹೌದು. ನನಗೆ ರೂ. 3,000/- ಕೊಟ್ಟಿಲ್ಲ ಮತ್ತು ಶೌಚಾಲಯ ಕಟ್ಟಿಸಿಕೊಟ್ಟಿಲ್ಲ ಎಂದು ಪೊಲೀಸ್ ನವರಿಗೆ ನಾನು ಹೇಳಿದ್ದೇನೆ ಎಂದರೆ ಅವರು ಕೇಳಿದ್ದರೆ ನಾನು ಹೇಳಿರಬಹುದು. ನಿ.ಪಿ. 50 ರಂತೆ ನಾನು ಹೇಳಿಕೆಯನ್ನು ಲೋಕಾಯುಕ್ತ ಪೊಲೀಸ್ ನವರಿಗೆ ಕೊಟ್ಟಿದ್ದೇನೆ ಎಂದರೆ ನೆನಪಿಲ್ಲ. ನನಗೆ ಈ ವಿಷಯ ಎಲ್ಲಾ ಗೊತ್ತಿದ್ದರೂ ನೆನಪಿಲ್ಲ ಗೊತ್ತಿಲ್ಲ ಎಂದು ನಾನು ಆರೋಪಿ ನನ್ನ ಊರಿನವನು ಆಗಿರುವುದರಿಂದ ಸಹಾಯ ಮಾಡುವುದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

3. ನಾನು ಗ್ರಾಮ ಪಂಚಾಯತಿಗೆ ನನಗೆ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಡಬೇಕು ಎಂದು ಅರ್ಜಿ ಕೊಟ್ಟಿರುವುದಿಲ್ಲ. ನನಗೆ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಪೊಲೀಸ್ ನವರು ಬಂದು ಸಹಿ ಪಡೆದಿದ್ದನ್ನು ನಾನು ಪೊಲೀಸ್ ನವರು ನನ್ನಿಂದ ಸಹಿ ಪಡೆದರು ಎಂದು ಹೇಳಿದ್ದೆನಾ ಎಂದರೆ ಹೌದು . ಅದನ್ನು ಬಿಟ್ಟರೆ ಪೊಲೀಸ್ ನವರು ಯಾವತ್ತೂ ನನ್ನ ಬಳಿ ಬಂದಿಲ್ಲ ಮತ್ತು ವಿಚಾರಣೆ ಮಾಡಿಲ್ಲ ಎಂದರೆ ಹೌದು .

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ